ಯಾವುದೋ ಎಕಾನಮಿ ಫ್ಲೈಟ್ ಏರಿ ಕುಳಿತ ನಿರಂಜನನಿಗೆ, ಟೇಕ್‌ಆಫ್ ಆದಂತೆಲ್ಲ ಅಮ್ಮನ ನೆನಪುಗಳು ಅಲೆಅಲೆಯಾಗಿ ಬರತೊಡಗಿದವು.

ಮಗನ ಓದಿಗೆಂದು ಹಣ ಕೂಡಿಡಲು ತನ್ನ ಕೂಲಿಯ ಜೊತೆಗೆ ನಾಟಿ ಕೋಳಿಗಳನ್ನೂ ಸಾಕುತ್ತಿದ್ದಳು. ಫಲವತ್ತಾಗಿ ಮೊಟ್ಟೆ ಇಡುವ, ಮರಿ ಮಾಡುವ ನಾಲ್ಕೈದು ತಾಯಿ ಕೋಳಿಗಳನ್ನು ಇಟ್ಟುಕೊಂಡು ಉಳಿದವನ್ನು ವಯಸ್ಸಿಗೆ ಬರುತ್ತಿದ್ದಂತೆಯೇ ಮಾರಿಬಿಡುತ್ತಿದ್ದಳು. ಒಂದು ಕೋಳಿ ಕಾವಿಗೆ ಬರುವುದರೊಳಗೆ ಹದಿನೈದಿಪ್ಪತ್ತು ಮೊಟ್ಟೆಗಳನ್ನು ಸಂಗ್ರಹಿಸಿಟ್ಟುಕೊಂಡು ಉಳಿದವನ್ನೆಲ್ಲ ಮಾರಿ, ಮಗನಿಗೆ ಪುಸ್ತಕ, ಪೆನ್ನು, ಬಟ್ಟೆ, ಫೀಸು ಅಂತೆಲ್ಲ ಕೊಡಿಸುತ್ತಿದ್ದಳು. ಆದರೆ ಈ ಸಲ ಹಣಕಾಸಿನ ಬಿಕ್ಕಟ್ಟು ಉಂಟಾಗಿ ಮರಿಮಾಡಿಸಲು ಎತ್ತಿಡಬೇಕಾಗಿದ್ದ ಮೊಟ್ಟೆಗಳನ್ನೂ ಮಾರಿಬಿಟ್ಟಿದ್ದರಿಂದ ಕೋಳಿ ತನ್ನ ಕಾವಿನ ದಿನಗಳನ್ನು ಮೊಟ್ಟೆಯಿಲ್ಲದೇ ಕಳೆಯುತ್ತಿತ್ತು.

ನಿರಂಜನ ಓದುತ್ತಿದ್ದ ಮೂಲೆಯ ಪಕ್ಕದಲ್ಲೇ ಕಾವಿಗೆ ಕೂತಿದ್ದ ಕೋಳಿ ಮಾಡುತ್ತಿದ್ದ ಸದ್ದಿಗೆ, ಹೊರ ಸೂಸುತ್ತಿದ್ದ ಶಾಖಕ್ಕೆ ಅವನಿಗೆ ಗೂರಲು ಬಂದಂತಾಗಿತ್ತು. ಇದ್ದದ್ದು ಒಂದೇ ಕೋಣೆಯ ಮನೆ. ಅದರಲ್ಲೇ ಒಂದು ಮೂಲೆಯಲ್ಲಿ ಅಡುಗೆ ಮನೆ, ಇನ್ನೊಂದು ಮೂಲೆಯಲ್ಲಿ ಕಾವಿಗೆ ಕುಂತಿದ್ದ ಕೋಳಿ, ಮತ್ತೊಂದು ಮೂಲೆಯಲ್ಲಿ ಇವನು ಓದಲು ಕೂರುತ್ತಿದ್ದ ಸ್ಟಡಿ ಟೇಬಲ್ಲು. ಉಳಿದಂತೆ ರಾತ್ರಿ ಇಡೀ ಮನೆಯೇ ಶಯ್ಯಾಗೃಹ. ಅದೇ ಮನೆಯಿಂದ ಆಗಲೇ ಐವರು ಹೆಣ್ಣುಮಕ್ಕಳೂ ಮದುವೆಯಾಗಿ ಅವರವರ ಗಂಡನ ಮನೆ ಸೇರಿಬಿಟ್ಟಿದ್ದರು.

ರೂಢಿಯಂತೆ ನೆಲ್ಲುಹುಲ್ಲಿನ ಮಂಕರಿಯಲ್ಲಿ ರೆಕ್ಕೆ ಅಡರಿಸಿ ಕುಂತು, ಕಾಲನ್ನು ಮೆಲ್ಲಗೆ ಕೆರೆಯುತ್ತ ಮೊಟ್ಟೆಗಳನ್ನು ರೆಕ್ಕೆಗಳಡಿಯ ಕಾವಿಗೆ ಆತುಕೊಳ್ಳುತ್ತಿದ್ದದ್ದು, ನೆಲ್ಲೂ ಇಲ್ಲದೇ, ಮೊಟ್ಟೆಯೂ ಇಲ್ಲದೇ ನೆಲವನ್ನೇ ಪರಪರ ಕೆರೆಯುತ್ತ, ಯಾರೋ ಮೊಟ್ಟೆಗಳನ್ನು ಕದ್ದೊಯ್ದಿದ್ದಾರೆ ಎನ್ನುವಂತೆ ಕೊಕ್ಕರಿಯುತ್ತಿತ್ತು. ನಿರಂತರವಾದ ಈ ಪ್ರಕ್ರಿಯೆಯಿಂದ ತನ್ನ ಓದಿಗೆ ಆಗುತ್ತಿರುವ ಅಡ್ಡಿಯಿಂದಾಗಿ ರೋಸಿ ಹೋದ ನಿರಂಜನ, ಅದರ ಕಾವನ್ನು ಬಿಡಿಸುವ ನೆವದಲ್ಲಿ ಮುಸುರೆಬಾನಿಗೆ ತುಂಬಿದ್ದ ತಣ್ಣೀರಿನಲ್ಲಿ ಅದ್ದಿದ. ಅದ್ದಿದವನು ಕೂಡಲೇ ಅದನ್ನು ಹೊರಗೆತ್ತಿಕೊಳ್ಳುವ ಬದಲು ಅವನ ಸಿಟ್ಟು ಆರುವವರೆಗೂ ಹಲ್ಲುಮುಡಿ ಕಚ್ಚಿ ಹಾಗೆಯೇ ಮುಳುಗಿಸಿಟ್ಟುಕೊಂಡಿದ್ದ. ಆಮೇಲೆ ಇನ್ನು ಸಾಕು ಎನ್ನಿಸಿ, ಎತ್ತಿ ಮೇಲಕ್ಕೆ ಎಸೆದ. ಎಸೆದ ಏಟಿಗೆ ಅದು ರೆಕ್ಕೆಬಿಚ್ಚಿ ಹಾರುತ್ತ ಕೆಳಕ್ಕೆ ಲ್ಯಾಂಡಿಂಗ್ ಆಗುವ ಬದಲು ಸಗಣಿ ತೊಪ್ಪೆಯಂತೆ ಧೊಪ್ಪನೆ ಬಿತ್ತು. ಹಿಂದೆಲ್ಲ ಅನೇಕ ಸಲ ಹೀಗೇ ತಣ್ಣೀರಲ್ಲಿ ಅದ್ದೀ ಅದ್ದಿ ಅದರ ಕಾವು ಬಿಡಿಸಿದ್ದರೂ ಈ ಸಲ ಯಾಕೆ ಹೀಗಾಯಿತು ಎಂಬುದರ ಅರಿವಾಗಲಿಲ್ಲ. ಅದರ ಮೈಮಾತ್ರವಲ್ಲದೇ ಅದರ ತಲೆಯನ್ನೂ ಅಷ್ಟೊತ್ತು ನೀರಲ್ಲಿ ಮುಳುಗಿಸಿದ್ದರಿಂದಲೇ ಉಸಿರು ಕಟ್ಟಿ ಅದರ ಪ್ರಾಣಪಕ್ಷಿ ಹಾರಿಹೋಗಿದೆ ಎಂಬುದು ಮನವರಿಕೆಯಾಯಿತು. ಆದರೆ ಆ ಪ್ರಾಣಪಕ್ಷಿ ಎಂಬುದು ಹಾರಿಹೋದದ್ದಾದರೂ ಎಲ್ಲಿಗೆ? ತಾನು ಅದನ್ನು ಬಗ್ಗಿ ನೋಡುತ್ತಲೇ ಇದ್ದೆನಲ್ಲವೇ? ಯಾವ ಪಕ್ಷಿಯೂ ಮೇಲಕ್ಕೆ ಹಾರಲಿಲ್ಲವಲ್ಲ? ಹೋಗಲಿ, ಅದು ಬಿಟ್ಟ ಉಸಿರಿನ ಗಾಳಿಯ ಗುಳ್ಳೆಯೂ ಮೇಲೆ ಬರಲಿಲ್ಲವಲ್ಲ? ಹಾಗಾದರೆ ಅದರ ಪ್ರಾಣಪಕ್ಷಿ ಹೇಗೆ ಹಾರಿಹೋಯಿತು ಎಂಬ ಆಧ್ಯಾತ್ಮಿಕ ಚಿಂತನೆಗೆ ಬಿದ್ದ. ಜೀವಶಾಸ್ತ್ರದ ವಿದ್ಯಾರ್ಥಿಯಾಗಿ ಕಾಲೇಜು ಓದುತ್ತಿದ್ದ ಹುಡುಗನಿಗೆ ತನ್ನ ಅಪ್ಪ ಅವ್ವ ಬಂದು ಇದ್ದ ಒಂದು ಕೋಳಿಯನ್ನು ಸಾಯಿಸಿಬಿಟ್ಟೆಯಲ್ಲ ಎಂದು ಎಲ್ಲಿ ಚಚ್ಚಿ ಹಾಕಿಬಿಡುವರು ಎಂಬುದಕ್ಕಿಂತಲೂ ಹೆಚ್ಚಾಗಿ ಇದೇ ಮನಸ್ಸನ್ನು ಕೊರೆಯುತ್ತಿತ್ತು. ಶಾಲೆಯಲ್ಲಿ ಕಪ್ಪೆಯನ್ನು ಕತ್ತರಿಸಿ ಅದರ ಅಂಗಾಂಗಗಳನ್ನು ವಿಶ್ಲೇಷಿಸುವಂತೆ ಕೋಳಿಯನ್ನು ಕತ್ತರಿಸಿ ಅದರ ವಿವಿಧ ಅಂಗಾಂಗಗಳನ್ನು ಪರಿಶೋಧಿಸಬೇಕು ಎಂದೆನಿಸಿದರೂ, ಅದನ್ನು ಮೀರಿ ಅದರ ಪ್ರಾಣ ಎಲ್ಲಿಗೆ ಹೋಯಿತು ಎಂಬ ಚಿಂತನೆಯೇ ಯಾಕೋ ಬಲವಾಗಿ ಕಾಡಲಾರಂಭಿಸಿತ್ತು.